। ಹರಿಃ ಓಂ ।

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ಗುರುಭ್ಯೋ ನಮಃ

# ಓಂನಮೋ ಭಗವತೇ ವಾಸುದೇವಾಯ

## (ಒಂದು ಉಪಾಸನಾ ಕ್ರಮ)



ಸಂಗ್ರಹ – ನಿರೂಪಣೆ

ಪ್ರೊ॥ ಬದರೀನಾಥಾಚಾರ್ಯ ಘೂಳೀ ಎಂ.ಎ.

ಮಾಧವ ಮಧ್ವ ಪ್ರಕಾಶನ

ಬೆಂಗಳೂರು

ಅಕ್ಷರ ಜೋಡಣೆ ಮತ್ತು ವಿನ್ಯಾಸ

**ಪಿ.ಎಸ್. ರಾಘವೇಂದ್ರ**

**ಬನಶಂಕರಿ ೧ನೇ ಹಂತ (ಹನುಮಂತನಗರ),**

**ಬೆಂಗಳೂರು – ೫೬೦ ೦೫೦**

**ದೂ : ೦೮೦–೨೨೪೨೧೨೯೪**

# ಓಂನಮೋ ಭಗವತೇ ವಾಸುದೇವಾಯ

## (ಒಂದು ಉಪಾಸನಾ ಕ್ರಮ)

ಶಾಸ್ತ್ರಾಧ್ಯಯನದಿಂದ ಲಭ್ಯ ಜ್ಞಾನ ಸಹಿತ ಭಕ್ತಿ, ಉಪಾಸನೆ ಇತ್ಯಾದಿಯಾಗಿ ಅಪರೋಕ್ಷ ಪಡೆಯಲು ಹಲವು ಮೆಟ್ಟಲುಗಳಿವೆ. ಪ್ರಸ್ತುತ ಉಪಾಸನೆ ಮಾಡುವಲ್ಲಿ ನಮ್ಮ ಉಪಾಸ್ಯ ಮೂರ್ತಿಯ ಆಕಾರವನ್ನು ಮಾತ್ರವಲ್ಲದೆ, ಆ ಮೂರ್ತಿಯ ಗುಣ, ಮಹಿಮೆಗಳ ತಿಳುವಳಿಕೆಯೂ, ಅವಶ್ಯವೆಂಬುದು ಅಪರೋಕ್ಷಕ್ಕೆ ಕಾರಣವಾಗಿರುತ್ತೆ. ಹೀಗೆ ಅಪರೋಕ್ಷಕ್ಕೆ ಕಾರಣೀಭೂತವಾದ ದ್ವಾದಶಾಕ್ಷರ ಮಂತ್ರವಾದ **''ಓಂನಮೋ ಭಗವತೇ ವಾಸುದೇವಾಯ''.** ಈ ಉಪಾಸನಾ ಕ್ರಮವು ವಾಮನ, ನೃಸಿಂಹ ಭಾಗವತ ಪುರಾಣಗಳಲ್ಲಿ ಉಲ್ಲೇಖವಾಗಿದೆ.

ಈ ಮಹಾಮಂತ್ರವು ವಾಮನ ಪುರಾಣದಲ್ಲಿ ೬೧ನೇ ಅಧ್ಯಾಯದಲ್ಲಿ ವರ್ಣಿತವಾಗಿರುತ್ತದೆ. ಗುರು ಉಪದೇಶ ಪಡೆದ ಸಾಧಕರು ಈ ಮಂತ್ರವನ್ನು ಕನಿಷ್ಠ ೧೨ ಸಲವಾದರೂ ಜಪಸಿ **ವಾಸುದೇವ** ಮೂರ್ತಿಯ ಉಪಾಸನೆ ಅರ್ಥಾನುಸಂಧಾನ ಪೂರ್ವಕ ಮಾಡಿದರೆ ಮಹಾಫಲದಾಯಕ. ಭಗವಂತನ ಪರಮಾನುಗ್ರಹಕ್ಕೆ ಪಾತ್ರರಾಗುವುದರಲ್ಲಿ ಸಂದೇಹವಿರುವುದಿಲ್ಲ. ಈ ಮಂತ್ರ ಜಪ ಉಪಾಸನೆ ಮಾಡಲು ಎಲ್ಲರೂ ಅಧಿಕಾರಿಗಳೆ. ವಯಸ್ಸು ವರ್ಣಗಳು ಮುಖ್ಯವಲ್ಲ. ಶ್ರದ್ಧೆ, ಭಕ್ತಿ ಮುಖ್ಯ ಕಾರಣವೆಂಬುದು ಶ್ರೀಮದ್ಭಾಗವತದಲ್ಲಿ ಸಾಕಷ್ಟು ದೃಷ್ಟಾಂತಗಳು ಕಂಡುಬರುತ್ತದೆ.

ಶ್ರೀಮದ್ಭಾಗವತ ಚತುರ್ಥ ಸ್ಕಂದದ ಒಂಭತ್ತನೇ ಅಧ್ಯಾಯದಲ್ಲಿ ಬಾಲಧ್ರುವರಾಜನ ಚರಿತ್ರೆಯಿಂದ ತಿಳಿಯಬಹುದು.

**ಏಕದಾ ಸುರುಚೇಃ ಪುತ್ರಮಂಕಮಾರೋಪ್ಯ ಲಾಲಯನ್ । ಉತ್ತಮಂ ನಾರುರುಕ್ಷಂತಮ್ ಧೃವಂ ರಾಜಾಭ್ಯನಂದತ । ತಥಾ ಚಿಕೀರ್ಷಮಾಣಂ ತಂ ಸಪತ್ನ್ಯಾಸ್ತನಯಂ ಧೃವಂ। ಸುರುಚಿಃ ಶೃಣ್ವತೋ ರಾಜ್ಞಃ ಸೇರ್ಷಮಾಹಾತಿಗರ್ವಿತಾ । ನ ವತ್ಸ ನೃಪತೇರ್ಧಿಷ್ಣ್ಯಂ ಭವಾನಾರೋಢುಮರ್ಹತಿ । ಸ ಗೃಹೀತೋ ಮಯಾ ಯತ್ತ್ವಂ ಕುಕ್ಷಾವಪಿ ನೃಪಾತ್ಮಜಃ॥ ತಪಸಾऽऽರಾಧ್ಯ ಪುರುಷಂ ತಸ್ಯೈವಾನುಗ್ರಹೇಣ ಮೇ ಗರ್ಭೇತ್ವಂ ಸಾಧಯಾತ್ಮಾನಂ ಯದಿಚ್ಛಸಿ ನೃಪಾಸನಮ್ ॥**

ಒಂದು ದಿವಸ ಉತ್ತಾನ ಪಾದರಾಜನು ತನ್ನ ಎರಡನೇ ಸತಿಯಾದ ಸುನೀತಿಯ ಮಗನಾದ ಉತ್ತಮನನ್ನು ತೊಡೆಯ ಮೇಲೆ ಕೂಡಿಸಿಕೊಂಡು ಲಾಲನ ಮಾಡುತ್ತಿದ್ದನು. ಅಷ್ಟರಲ್ಲಿ ರಾಜನ ಪ್ರಥಮ ಮಡದಿ ಸುರೂಚಿಯ ಪುತ್ರನಾದ ಧೃವನು ಆಗಮಿಸಿ ತಾನೂ ಸಹ ತಂದೆಯ ತೊಡೆಯ ಮೇಲೆ ಕೂಡುವ ಆಸೆಯಾಯಿತು. ಬಂದ ಧೃವನನ್ನು ರಾಜನು ಕರೆಯಲಿಲ್ಲ. ಸುಮ್ಮನಿದ್ದ. ಧೃವನು ರಾಜನ ತೊಡೆಯ ಮೇಲೆ ಕೂಡಬೇಕೆಂಬ ಇಚ್ಛೆಯನ್ನು ನೋಡಿ ಗರ್ವಿಷ್ಟಳಾದ ಸುನೀತಿ ಈರ್ಷೆಯಿಂದ ''ವತ್ಸ, ಧೃವ ನೀನು

ರಾಜಪುತ್ರನಾದರೂ ರಾಜನ ಅಂಕವನ್ನು ಏರಲು ಅರ್ಹನಲ್ಲ. ಕಾರಣ ನೀನು ನನ್ನ ಗರ್ಭದಲ್ಲಿ ಹುಟ್ಟಿಲ್ಲ. ರಾಜಪುತ್ರನಾದರೂ ನೀನು ಬೇರೊಬ್ಬಳ ಹೊಟ್ಟೆಯಲ್ಲಿ ಜನಿಸಿದವ. ಕೇಳು. ಮಹಾರಜನ ತೊಡೆಯಲ್ಲಿ ಕೂಡಬೇಕೆಂದೆನಿಸಿದರೆ ಹೋಗು. ತಪಸ್ಸನ್ನು ಮಾಡು. ಆ ಪುರುಷೋತ್ತಮನಾದ ಹರಿಯ ಪ್ರಸಾದದಿಂದ ನನ್ನ ಗರ್ಭದಲ್ಲಿ ಜನಿಸು. ಆಗ ನೀನು ಅರ್ಹನಾಗುವೆ. ನಡೆ, ಇಲ್ಲಿರಬೇಡ" ಎಂಬ ನಿಷ್ಠುರ ವಾಕ್ಯಗಳನ್ನು ಕೇಳಿ ಹಿಂತಿರುಗಿ ತನ್ನ ಹೆತ್ತ ತಾಯಿಯಲ್ಲಿ ಬಂದು ನಡೆದ ವೃತ್ತಾಂತವನ್ನು ತಿಳಿಸುತ್ತಾನೆ.

**ಸತ್ಯಂ ಸುರುಚ್ಯಾಭಹಿತಂ ಭವಾನ್ಮೇ ।**
**ಯದ್‌ದುರ್ಭಾಗಾಯಾ ಉದರೇ ಗೃಹೀತಃ ॥**
**ಸ್ತನ್ಯೇನ ವೃದ್ಧಶ್ಚ ವಿಲಜ್ಜತೇಯಾಂ**
**ಭಾರ್ಯೇತಿ ವಾ ವೋಢುಮಿಡಸ್ಪತಿರ್ಮಾಮ್ ।**
**ಆತಿಷ್ಠ ತತ್ತಾತ ವಿಮತ್ಸರಸ್ತ್ವ–**
**ಮುಕ್ತಂ ಸಮಾತ್ರಾಪಿ ಯದವ್ಯಲೀಕಮ್ ॥**

ಧ್ರುವನು ಅಳುತ್ತಾ ತಾಯಿಯಲ್ಲಿ ನಡೆದ ವೃತ್ತಾಂತ ತಿಳಿಸಿದಾಗ ಮಾತೆ ಸುನೀತಿ ರೋದಿಸುವ ಮಗನನ್ನು ನೋಡಿ ತಾನೂ ಅಳುತ್ತಾಳೆ. "ಆ ದೈವವೇ ನಾನು ಮಾಡಿದ ಪಾಪವೆಂತಹದು. ನನ್ನ ದುಃಖಕ್ಕೆ ಕೊನೆಯೇ ಇಲ್ಲವೇ ?" ಎಂದು ಗೋಳಾಡಿ ಸ್ವಲ್ಪ ಸಮಯದ ನಂತರ ಧೈರ್ಯವನ್ನು ಪಡೆದು ಮಗ ಧ್ರುವನಿಗೆ "ಹೇ ಪುತ್ರ ಕೇಳು. ಅನ್ಯರಿಗೆ ಕೆಡಕನ್ನು ಬಯಸಬೇಡ. ನಾನು ಪಡೆದು ಬಂದಿದ್ದನ್ನೇ ಅನುಭವಿಸಬೇಕು." ಸುರುಚಿಯು ಮಾತಿನಲ್ಲಿ ಅಸತ್ಯವಿಲ್ಲ. ಸತ್ಯವನ್ನೇ ಹೇಳಿದ್ದಾಳೆ. ನೀನಾದರೋ ದೌರ್ಭಾಗ್ಯಳಾದ ನನ್ನ ಉದರದಿಂದ ಹುಟ್ಟಿರುವೆ. ನಿನ್ನ ತಂದೆ ನನ್ನನ್ನು ತನ್ನ ಮಡದಿ ಎಂದು ಹೇಳಲು ನಾಚುತ್ತಾನೆ. ಆಯಿತು, ಪ್ರಿಯವತ್ಸಾ ಏಳು. ಸುರುಚಿಯು ಯೋಗ್ಯವಾದುದನ್ನೇ ಹೇಳಿರುತ್ತಾಳೆ. ಅವಳ ಮಾತನ್ನು ಸತ್ಯವನ್ನಾಗಿಸು. ನೀನೂ ಸಹ ಉತ್ತಮನಂತೆ ತಂದೆಯ ಅಂಕದ ಮೇಲೆ ಕೂಡುವ ಅರ್ಹತೆ ಪಡೆಯಲು ಅಧೋಕ್ಷಜನ ಪಾದಾರವಿಂದವನ್ನು ಆರಾಧಿಸು. ಸುರುಚಿಯೂ ನಿನ್ನ ತಾಯಿ ಎಂದೇ ಭಾವಿಸು. ಅವಳಲ್ಲಿ ಮಾತ್ಸರ್ಯ ಮಾಡದೇ ಸಾಧು ವಾಕ್ಯವನ್ನೇ ಸ್ವೀಕರಿಸು ಎಂದು ಹೇಳುತ್ತಾಳೆ. **"ಆರಾಧಯಾಧೋಕ್ಷಜ ಪಾದಪದ್ಮಂ ಯದಿಚ್ಛಸೇಽಧ್ಯಾಸನ ಮುತ್ತಮೋಯಥಾ॥"** ಮಾತ್ಸರ್ಯ ಬಿಡು ಸುರುಚಿಯನ್ನೂ ನಿನ್ನ ತಾಯಿಯಂತೆ ತಿಳಿ, ಅವಳ ವಾಕ್ಯ ನಿನ್ನ ಹಿತಕ್ಕಾಗಿಯೇ ಎಂದು ಭಾವಿಸಿ ಬ್ರಹ್ಮ ರುದ್ರೇಂದ್ರಾದಿ ದೇವತೆಗಳಿಂದ ಆರಾಧಿಸಲ್ಪಟ್ಟ ಭಗವಂತನಾದ ಅಧೋಕ್ಷಜನನ್ನು ಭಜಿಸಿ ಪರಿಚರ್ಯ ಮಾಡು ಎಂಬ ಹಿತೋಪದೇಶ ಕೇಳಿ ಕೂಡಲೇ ತಪವನ್ನಾಚರಿಸಲು ಅರಣ್ಯಕ್ಕೆ ತೆರಳುತ್ತಾನೆ.

## ನಾರದ ಧೃವ ಸಂವಾದ – ಉಪದೇಶ

ವಿವರಣೆ : ಶ್ರೀಹರಿ ಸತ್ಯಸಂಕಲ್ಪನು. ತನ್ನನ್ನು ಪಡೆಯಲು ಜ್ಞಾನದಿಂದಲೇ ಸಾಧ್ಯ.



ಇಂತಹ ಹರಿಜ್ಞಾನ ಪಡೆಯಲು ಗುರು ಉಪದೇಶ ಅವಶ್ಯ. ಧೃವನನ್ನು ಅನುಗ್ರಹಿಸಬೇಕೆಂದ ಸಂಕಲ್ಪಾನುಸಾರ ಬ್ರಹ್ಮದೇವರ ಮಾನಸ ಪುತ್ರರಾದ ದೇವರ್ಷಿ ಶ್ರೀನಾರದರನ್ನು ಕಳುಹಿಸುತ್ತಾನೆ. **(ನೂನಂ ಭವಾನ್ ಭಗವತೋ ಯೋಽಂಗಜಃ ಪರಮೇಷ್ಠಿನಃ । ವಿತುದನ್ನಚತೇ ವಿಣಾಂ ಹಿತಾರ್ಥಂ ಜಗತೋಽರ್ಕವತ್॥)** ಧೃವರಾಜನನ್ನು ಪರೀಕ್ಷಿಸಲು (ನಂತರ ಉಪದೇಶಿಸಲು) ಬಂದಿರುತ್ತಾರೆ. ಈ ಕ್ಷತ್ರಿಯ ಬಾಲಕನ ತೇಜಸ್ಸು ಸಾಹಸವನ್ನು ನೋಡಿ ಆಶ್ಚರ್ಯದಿಂದ ಮನದಲ್ಲೇ ವಿಚಾರ ಮಾಡುತ್ತಾರೆ **"ಆಹಾ! ಈ ಬಾಲಕನ ಮಲತಾಯಿ ಬಿರುಸು ನುಡಿಗಳಿಂದ ದುಃಖಿತನಾಗಿ ಬಂದಿರುತ್ತಾನೆ"** ಎಂದು.

**ಎವಂ ಸಂಜಲ್ಪಿತಂ ಮಾತುರಾಕರ್ಣ್ಯಾರ್ಥಾಗಮಂ ವಚಃ**
**––––**

**ನಾರದಸ್ತದುಪಾಕರ್ಣ್ಯ ಜ್ಞಾತ್ವಾ ತಸ್ಯ ಚಿಕೀರ್ಷಿತಮ್ ।**
**ಸ್ಪೃಷ್ಟ್ವಾ ಮೂರ್ಧನ್ಯ ಘರ್ಘ್ನೇನ ಪಾಣಿನಾ ಪ್ರಾಹ ವಿಸ್ಮಿತಃ ॥**

**ಸಾಧುನಾಪ್ಯವಮಾನಂ ತೇ ಸಮ್ಮಾನಂ ವಾಪಿ ಪುತ್ರಕ ।**
**ಲಕ್ಷ್ಮಾಯಾಮಃ ಕುಮಾರಸ್ಯ ಸಕ್ತಸ್ಯ ಕ್ರೀಡನಾದಿಷು**

ಮಗು ನೀನು ಚಿಕ್ಕ ವಯಸ್ಸಿನವ. ಮಾನಾಪಮಾನಗಳ ಬಗ್ಗೆ ವಿಚಾರ ಮಾಡಬೇಡ. ಈ ವಯಸ್ಸಿನಲ್ಲಿ ಆಟಪಾಠಗಳಲ್ಲಿ ಕಳೆಯಬೇಕು. ನಿನ್ನ ಹಟವನ್ನು ತ್ಯಜಿಸು. ನಿನಗೆ ಅವಮಾನವೆಂದರೇನು. ಶತ್ರುಗಳು ಮಿತ್ರರು ಎಂಬ ಅರಿವೂ ಇರುವುದಿಲ್ಲ. ದುರಭಿಮಾನಕ್ಕೆ ಒಳಗಾದ ಮೋಹವು ಹುಟ್ಟುವುದು. ಬಿರುಸು ನುಡಿಗಳನ್ನು ಆಡಿಸಿದವನು ಪರಮಾತ್ಮನೇ ಆಗಿರುತ್ತಾನೆ. ಹೀಗೆ ಅಭಿಮಾನ ಬಿಟ್ಟವರಿಗೆ ಸುಖ ದುಃಖಗಳಿರುವುದಿಲ್ಲ. ಗುಣಿಗಳಾದ ಸಜ್ಜನರು ಶಮದಯಾದಿ ಗುಣವುಳ್ಳವರು. ತಮಗಿಂತ ಉತ್ತಮರಲ್ಲಿ ಶ್ರದ್ಧೆ, ಭಕ್ತಿ ನಿನ್ನ ಸಮಾನರಲ್ಲಿ ಪಿತೃತ್ವವನ್ನು, ಅಧಮರಲ್ಲಿ ದಯೆ ಅನುಕಂಪ ತೋರಿಸುವರು. ಆದ್ದರಿಂದ ಧೃವ ಅಭಿಮಾನ ಪರಿತ್ಯಾಗ ಮಾಡು. ನಿನ್ನ ಮಲತಾಯಿ ನುಡಿದಳೆಂದಾಕ್ಷಣ ತಾಯಿಯ ವಾಕ್ಯದಿಂದ ಅರಣ್ಯವನ್ನು ಸೇರುವೆಯಾ ? ಶ್ರೀಹರಿಯ ಕೃಪೆಗೆ ಪಾತ್ರನಾಗಲು ನಿನ್ನ ಅಭೀಷ್ಟ ಸಿದ್ಧಿಸುವುದೆಂದು ತಿಳಿದಿರುವೆಯಾ ? ಭಗವಂತನ ಆರಾಧನೆ, ತಪಸ್ಸು ಬಹು ಕಠಿಣ. ಎಂತೆಂತಹ ತಪಸ್ವಿಗಳು ಬಹು ಜನ್ಮಗಳಿಂದಲೂ ಆರಾಧಿಸುತ್ತಿರುವರು. ಅವರಿಗೆ ಶ್ರೀಶನ ದರ್ಶನ ದುರ್ಲಭವಾಗಿದೆ. ಎಂದ ಮೇಲೆ ನೀನು ಇನ್ನೂ ಹಸುಳೆ. ವನದಲ್ಲಿ ತಪಸ್ಸನ್ನಾಚರಿಸುವ ಯುಕ್ತ ವಯಸ್ಸು ಇರುವುದಿಲ್ಲ. ಹಿಂತಿರುಗು. ನಿನ್ನ ಈ ಛಲ ನಿಷ್ಫಲವೇ ಸರಿ. ವೃದ್ಧಾಪ್ಯ ಬಂದಾಗ ತಪಸ್ಸನ್ನು ಮಾಡುವೆಯಂತೆ. ಸುಖ ದುಃಖ ದೈವಾಧೀನವೆಂದು ಸ್ವೀಕರಿಸಬೇಕು.

**ಮುನಯಃ ಪದವೀಂ ಯಸ್ಯ ನಿಃಸ್ಸಂಗೇನೋರುಜನ್ಮಭಿಃ ।**
**ನವಿದುರ್ಮೃಗಯಂತೋಽಪಿ ತೀವ್ರಯೋಗಸಮಾಧಿನಾ ॥**

**ಅತೋ ನಿವರ್ತತಾಮೇಷ ನಿರ್ಬಂಧಸ್ತವ ನಿಷ್ಫಲಃ ।**

----

**ಗುಣಾಧಿಕಾನ್ಮುದಂ ಲಿಪ್ಸೇದನುಕ್ರೋಶಂ ಗುಣಾಧಮಾತ್ ।**
**ಮೈತ್ರೀಂ ಸಮಾನಾದನ್ವಿಚ್ಛೇನ್ನ ತಾಪೈರಭಿಭೂಯತೇ ॥**

ಹೀಗೆ ನಾರದರು ಉಪದೇಶಿಸಿದ ಮೇಲೆ ಧ್ರುವನು ನಾರದ ಮಹಾಮುನಿಗಳೇ, ನಿಮ್ಮ ವಾಕ್ಯಾಮೃತವನ್ನು ಪಾನ ಮಾಡಿದೆ. ಆದರೆ ಸುರುಚಿಯ ನಿಷ್ಠುರ ಮಾತುಗಳೆಂಬ ಬಾಣಗಳು ನನ್ನ ಹೃದಯವನ್ನು ಕೊರೆಯುತ್ತಿದೆ. "ನೀನು ಮತ್ತೆ ನನ್ನ ಉದರದಲ್ಲಿ ಜನಿಸು" ಎಂದರೆ ಈಗ ಮರಣ ಹೊಂದು ಎಂದು ಹೇಳಿದಂತಾಯಿತಲ್ಲಾ. ಕ್ಷತ್ರಿಯನಾದ ನಾನು ಹೇಗೆ ಸಹಿಸಲಿ.

ಪೂಜ್ಯರೇ ನೀವು ತ್ರಿಲೋಕ ಸಂಚಾರಿಗಳು ಲೋಕಕಲ್ಯಾಣಾರ್ಥಕ್ಕಾಗಿರುವವರು. ನನ್ನನ್ನು ಮರಳಿ ಹೋಗೆಂದು ಹೇಳದೇ ನನಗೆ ದುರ್ಲಭನಾದ ಶ್ರೀಹರಿಯನ್ನು ಪಡೆಯಲು ಯೋಗ್ಯ ಉಪದೇಶ ಮಾಡಿರಿ.

**ಪದಂ ತ್ರಿಭುವನೋತ್ಕೃಷ್ಟಂ ಜಿಗೀಷೋಃ ಸಾಧುವರ್ತ್ಮ ಮೇ ।**
**ಬ್ರೂಹ್ಯಸ್ಮತ್ಪಿತೃಭಿರ್ಬ್ರಹ್ಮನ್ನನ್ಯೈರಪ್ಯನಧೀಷ್ಠಿತಮ್ ॥**

**ನೂನಂ ಭವಾನ್ ಭಗವತೋ ಯೋಽಂಗಜಃ ಪರಮೇಷ್ಠಿನಃ ।**
**ಪಿತುದನ್ನಟತೇ ವೀಣಾಂ ಹಿತಾರ್ಥಂ ಜಗತೋಽರ್ಕವತ್ ॥**

ಹೀಗೆ ಹೇಳಿಸಿಕೊಂಡ ನಾರದರು

**ಇತ್ಯುದಾಹೃತ ಮಾಕರ್ಣ್ಯ ಭಗವಾನ್ನಾರದಸ್ತದಾ ।**
**ಪ್ರೀತಃ ಪ್ರತ್ಯಾಹ ತಂ ಬಾಲಂ ಸದ್ವಾಕ್ಯಮನುಕಂಪಯಾ ॥**

ನಾರದರು ಬಾಲಧ್ರುವನ ವಾಕ್ಯಗಳನ್ನು ಆಲಿಸಿ ಪ್ರೀತರಾಗಿ ಅವನಲ್ಲಿ ಅನುಕಂಪ ತೋರಿ ಹೀಗೆ ಹೇಳಿದರು.

ಧ್ರುವ ನಿನ್ನ ಛಲ ಅಚಲವಾಗಿದೆ. ಪ್ರೀತನಾಗಿರುವೆನು. ನಿನ್ನ ತಾಯಿಗಿಂತ ಅನ್ಯರ್ಯಾರೂ ಹಿತರಲ್ಲ. ಅವಳ ಮಾತಿನಂತೆ ಭಗವಂತನನ್ನು ಭಕ್ತಿಯಿಂದ ಆರಾಧಿಸು.

**ಜನನ್ಯಾಭಿಹಿತಃ ಪಂಥಾಃ ಸವೈನಿಃಶ್ರೇಯಸಸ್ಯತೇ ।**
**ಭಗವಾನ್ ವಾಸುದೇವಸ್ತಂ ಭಜ ತತ್ಪ್ರವಣಾತ್ಮನಾ ॥**

**ಧರ್ಮಾರ್ಥಕಾಮಮೋಕ್ಷಾಖ್ಯಂ ಯ ಇಚ್ಛೇಚ್ಛ್ರೇಯ ಆತ್ಮನಃ ।**
**ಏಕಮೇವ ಹರೇಸ್ತತ್ರ ಕಾರಣಂ ಪಾದಸೇವನಂ ॥**

**ತತ್ತಾತ ಗಚ್ಛ ಭದ್ರಂ ತೇ ಯಮುನಾಯಾಸ್ತಟಂ ಶುಚಿ ।**
**ಪುಣ್ಯಂ ಮಧುವನಂ ಯತ್ರ ಸಾನ್ನಿಧ್ಯಂ ನಿತ್ಯದಾ ಹರೇಃ ॥**



**ಸ್ನಾತ್ವಾನುಸವನಂ ತಸ್ಮಿನ್ ಕಾಲಿಂದ್ಯಾಃಸಲಿಲೇಶಿವೇ ।**
**ಕೃತ್ವೋಚಿತಾನಿ ನಿವಸನ್ನಾತ್ಮನಃ ಕಲ್ಪಿತಾಸನಃ ॥**

**ಪ್ರಾಣಾಯಾಮೇನ ತ್ರಿವೃತಾ ಪ್ರಾಣೇಂದ್ರಿಯಮನೋಮಲಮ್ ।**
**ಶನೈಃರ್ಯುದುಸ್ಯಾಭಿ ಧ್ಯಾಯೇನ್ಮನಸಾ ಗುರುಣಾ ಗುರುಮ್ ॥**

-----

**ಪ್ರಸಾಭಿಮುಖಂ ಶಶ್ವತ್ಪ್ರಸನ್ನವದನೇಕ್ಷಣಮ್ ।**
**ಸುನಾಸಂ ಸುಭ್ರುವಂ ಚಾರುಕಪೋಲಂ ಸುರಸುಂದರಂ ॥**

**ತರುಣಂ ರಮಣೀಯಾಂಗಮರುಣೋಷ್ಠಕ್ಷಣಾಧರಮ್ ।**
**ಪ್ರಣತಾಶ್ರವಣಂ ನೃಮ್ಣಾಂ ಶರಣ್ಯಂ ಕರುಣಾರ್ಣವಮ್ ॥**

ಧರ್ಮಾರ್ಥ ಕಾಮಗಳನ್ನು ಬೇಡದೇ ಮಾನವನು, ಶ್ರೇಯಸ್ಸಾಧನೀಭೂತವಾದ **'ಓಂ'** ಎಂಬ ಮಂತ್ರ ಪ್ರತಿಪಾದ್ಯನಾದ ಶ್ರೀಹರಿಯೇ ಶರಣ್ಯನು ಎಂದು ತಿಳಿಯುತ್ತಾರೆ. ಮಗೂ, ನೀನು **ಓಂ**ಕಾರ ಮಂತ್ರ (**ಅ**ಕಾರ **ಉ**ಕಾರ **ಮ**ಕಾರ ರೂಪ) ಬೀಜಾಕ್ಷರಗಳನ್ನು ತಿಳಿಸುವ ಪ್ರಣವ ಪ್ರತಿಪಾದ್ಯನಾದ ಗುಣಪೂರ್ಣನೂ, ನಿರ್ದೋಷನೂ, ಆನಂದಮಯನೂ ಆದ ಶ್ರೀಮನ್ನಾರಾಯಣನನ್ನು ಜಪಿಸು, ಧ್ಯಾನಿಸು, ಇಂದ್ರಿಯಗಳನ್ನು ನಿಗ್ರಹಿಸಿ ಅಂತರ್ಮುಖಿಯಾಗಿ ಮಾಧವನಲ್ಲಿ ನಿಲ್ಲಿಸು. ಲೋಕೈಕ ಗುರುವೆಂದೆನಿಸಿದ ಬ್ರಹ್ಮದೇವರಿಗೂ ಗುರುವಾಗಿರುವ ಶ್ರೀರಮಾರಮಣನನ್ನು ಧ್ಯಾನ ಪ್ರಕಾರವನ್ನು ತಿಳಿಸುವೆನು. ವತ್ಸಾ ನೀನು ಪವಿತ್ರ ಯಮುನಾ ತೀರದಲ್ಲಿರುವ ಮಧುವನಕ್ಕೆ ತೆರಳು. ಅಲ್ಲಿ ಶ್ರೀಹರಿ ಸಾನ್ನಿಧ್ಯವು ಸದಾ ಇರುವುದು. ಶುದ್ಧ ಕಾಳಿಂದೀ ಮಡಿವಿನಲ್ಲಿ ಸ್ನಾನ ಮಾಡು. ನಿತ್ಯ ಕರ್ಮಗಳನ್ನು ಪೂರೈಸಿ ಏಕಾಂತ ಸ್ಥಳದಲ್ಲಿ ಶುದ್ಧ ಆಸನಾ ರೂಢನಾಗಿ ಏಕಾಗ್ರಚಿತ್ತನಾಗಿ ಶ್ರೀಹರಿಯನ್ನು ಧ್ಯಾನಿಸು. ಆ ಶ್ರೀಶನ ರೂಪ ಗುಣಗಳನ್ನು ಈ ರೀತಿ ಮನಸಾ ಚಿಂತಿಸು.

**ಶ್ರೀವತ್ಸಾಂಕಂ ಘನಶ್ಯಾಮಂ ಪುರುಷಂ ವನಮಾಲಿನಮ್ ।**
**ಶಂಖಚಕ್ರಗದಾಪದ್ಮೈರಭಿವ್ಯಕ್ತ ಚತುರ್ಭುಜಮ್ ।**
**ಕಿರೀಟನಂ ಕುಂಡಲಿನಂ ಕೇಯೂರವಲಯಾನ್ವಿತಮ್ ॥**

**ಕೌಸ್ತುಭಾಭರಣಗ್ರೀವಂ ಪೀತಕೌಶೇಯವಾಸಸಮ್ ।**
**ಕಾಂಚೀಕಲಾಪಪರ್ಯಸ್ತಂ ಮನೋನಯನವರ್ಧನಮ್ ॥**

**ಪದ್ಭ್ಯಾಂ ನಖಮಣಿಶ್ರೇಣ್ಯಾ ವಿಲಸದಭ್ಯಾಂ ಸಮರ್ಚತಾಂ ।**
**ಹೃತ್ಪದ್ಮಕರ್ಣಿಕಾಧೀಷ್ಣ ಮಾಕ್ರಮ್ಯಾತ್ಮನ್ಯವಸ್ಥಿತಮ್ ॥**

**ಸ್ಮಯಮಾನಮಭೀಧ್ಯಾಯೇತ್ಸಾನುರಾಗಾವಲೋಕನಮ್ ।**
**ನಿಯುತೇನೈಕಭೂತೇನ ಮನಸಾ ವರದರ್ಷಭಮ್ ।**

**ಏವಂ ಭಗವತೋ ರೂಪಂ ಸುಭದ್ರಂ ಧ್ಯಾಯತೋ ಮನಃ ।**
**ನಿರ್ವೃತ್ಯಾ ಪರಯಾ ತೂರ್ಣಂ ಸಂಪನ್ನಂ ನ ನಿವರ್ತತೇ ॥**

**ಜಪ್ಯಶ್ಚ ಪರಮೋ ಗುಹ್ಯಃ ಶ್ರೂಯತಾಂ ಮೇ ನೃಪಾತ್ಮಜ ।**
**ಯಂ ಸಪ್ತರಾತ್ರಂ ಪ್ರಪಠನ್ ಪುಮಾನ್ ಪಶ್ಯತಿ ಖೇಚರಾನ್ ॥**

**''ಓಂನಮೋ ಭಗವತೇ ವಾಸುದೇವಾಯ'' ।**
**ಮಂತ್ರೇಣಾನೇನ ದೇವಸ್ಯ ಕುರ್ಯಾದ್ ದ್ರವ್ಯಮಯೀಂ ಬುಧಃ ॥**

ಶ್ರೀಹರಿಯು ಸದಾ ತರುಣನು. ಮಂದಸ್ಮಿತ ವದನನೂ, ಶರಣಾಗತ ವತ್ಸಲನು, ಪ್ರಸನ್ನವದನನು, ಸುಂದರ, ವೀಕ್ಷಣನು, ನವರತ್ನಕಿರೀಟಧಾರಿಯು, ಕರ್ಣಕುಂಡಲಗಳಿಂದ ಶೋಭಿತ ಕಪೋಲನು, ಸಂಪಿಗೆ ಪುಷ್ಪದಂತೆ ನಾಸಿಕೆವುಳ್ಳವನು, ರಮಣೀಯ ಅಂಗ ಉಳ್ಳವನು, ಶ್ರೀವತ್ಸಾಂಕನು, ಘನಶ್ಯಾಮನು, ವನಮಾಲಾ ವಿಭೂಷಿತನು, ಶಂಖ ಚಕ್ರ ಗದಾ ಪದ್ಮಧರನು, ಚತುರ್ಭುಜನು, ಕೌಸ್ತುಭ ಕಾಂಚೀ ಕಲಾಪನು, ಕಸ್ತೂರಿತಿಲಕ ಶೋಭಿತ ಲಲಾಟವುಳ್ಳವನು, ನೂಪುರಾದಿ ಅನೇಕ ಅನರ್ಘ್ಯ ಭೂಷಣನು, ಪೀತಾಂಬರ ಧಾರಿಯು, ಶಾಂತನು, ಭಕ್ತರನ್ನು ಸಂರಕ್ಷಿಸುವ ನಯನಾನಂದನು ಸಾನುರಾಗಾವಲೋಕನು ಆದ ಶ್ರೀವರಪ್ರದ ದೇವದೇವ ಶ್ರೀಮನ್ನಾರಾಯಣನನ್ನು (ವಾಸುದೇವ) ನಿಷ್ಠೆಯಿಂದ ಧ್ಯಾನಿಸು. ರಾಜಪುತ್ರ ಧೃವ ಇಂತು ಪರಮ ಮಂಗಳ ರೂಪನಾದವನನ್ನು ಚಿಂತಿಸು. ದಯಾಪೂರ್ಣನಾದ ಶ್ರೀಪುರುಷೋತ್ತಮನು ನಿನಗೆ ದರ್ಶನ ಕೊಡುವನು. ನಿನ್ನ ಮನೋಮಂದಿರದಲ್ಲಿ ಘಟ್ಟಿಯಾಗಿ ನಿಲ್ಲುವನು. ಅವನ ಪಾದಾರವಿಂದ ಮಕರಂದವನ್ನು ನೀನು ಸದಾ ಪಾಲನೆ ಮಾಡುವಂತೆ ಅನುಗ್ರಹಿಸುತ್ತಾನೆ.

ನಿನಗೆ ಹರಿಧ್ಯಾನ ಹೊಂದಲು ಪರಮ ರಹಸ್ಯವಾದ ಮಂತ್ರವನ್ನು ಉಪದೇಶಿಸುತ್ತೇನೆ.

**''ಓಂನಮೋ ಭಗವತೇ ವಾಸುದೇವಾಯ''** ಎಂಬ ದ್ವಾದಶಾಕ್ಷರ ಮಂತ್ರವನ್ನು ಜಪಿಸು. ನೀನು ಎಷ್ಟು ಭಕ್ತಿಯಿಂದ ಆ ಶ್ರೀಶನನ್ನು ಚಿಂತಿಸುವೆಯೋ ಅಷ್ಟು ಬೇಗ ದಿವ್ಯದರ್ಶನ ಕೊಡುತ್ತಾನೆ. ಏಳು ದಿನಗಳಲ್ಲಿ ದರ್ಶನ ಪಡೆಯುವವನಾಗು.

**''ಓಂ''** ಎಂಬ ಮಂತ್ರದಿಂದ ಜಪಿಸು. ಆಯಾ ಕಾಲಕ್ಕೆ ಸಿಗುವ ಸುಗಂಧ ಪುಷ್ಪ, ತುಳಸಿ, ಶುದ್ಧ ಯಮುನಾ ಜಲ, ರಸಭರಿತ ಹಣ್ಣುಗಳಿಂದ ಇದ್ದದ್ದರಲ್ಲಿ ವಂಚನೆ ಮಾಡದೆ ಭಗವಂತನನ್ನು ಪೂಜಿಸು, ಆರಾಧಿಸು. ಶಿಲಾ ಪ್ರತಿಮೆಗಳಲ್ಲಿ ಸರ್ವಾಂತರ್ಯಾಮಿಯಾಗಿರುವನೆಂದು ಧ್ಯಾನಿಸು. ಮೌನವನ್ನಾಚರಿಸು. ಮಿತಾಹಾರಿಯಾಗಿ ಅರಣ್ಯದಲ್ಲಿ ಲಭ್ಯ ಕಂದಮೂಲ ಫಲಗಳನ್ನು ಶ್ರೀಹರಿಗೆ ಅರ್ಪಿಸಿ



ಸ್ವೀಕರಿಸು. ಅನಂತಾನಂತ ಕಲ್ಯಾಣ ಗುಣಗಳುಳ್ಳ ರಮಾಬ್ರಹ್ಮಾದಿವಂದಿತ ಚರಣಾರವಿಂದನು ಸರ್ವತ್ರವ್ಯಾಪ್ತನು, ದೋಷದೂರನು ಆದ ಶ್ರೀಹರಿಯ ಪುಣ್ಯಶ್ಲೋಕವನ್ನು ಮನಸ್ಸಿನಲ್ಲಿ ನೆನೆದು ಹಿಂದೆ ಋಷಿಮುನಿಗಳು ಪೂಜಿಸಿದ ರೀತಿ ಸೇವಿಸು. ಭಕ್ತಿಯೇ ಮೂಲ, ಭಕ್ತಿರಹಿತ ಪೂಜಾ ಆಡಂಬರವೆನಿಸುವುದು. ಇಂತು ಭಜಿಸಿದ ನಿರ್ಮಲವಾದ ಭಕ್ತಿಯನ್ನು ಮೆಚ್ಚಿ ಶ್ರೀಹರಿ ಸಕಲ ಇಷ್ಟಾರ್ಥಗಳನ್ನಲ್ಲದೇ ಅನಂತನು ಮುಕ್ತಿಯನ್ನು ದಯಪಾಲಿಸುವನು.

**ಏವಂ ಕಾಯೇನ ಮನಸಾ ವಚಸಾ ಚ ಮನೋಗತಮ್ ।**
**ಪರಿಚರ್ಯಮಾಣೋ ಭಗವಾನ್ ಭಕ್ತಿಮತ್ಪರಿಚರ್ಯಯಾ ॥**

**ಪುಂಸಾಮಮಾಯಿನಾಂ ಸಮ್ಯಗ್ಭಜತಾಂ ಭಾವವರ್ಧನಃ ।**
**ಶ್ರೇಯೋ ದಿಶತ್ಯಭಿಮತಂ ಯದ್ಧರ್ಮಾದಿಷು ದೇಹಿನಾಮ್ ॥**

**ವಿರಕ್ತಶ್ಚೇಂದ್ರಿಯರತೌ ಭಕ್ತಿಯೋಗೇನ ಭೂಯಸಾ ।**
**ತಂ ನಿರಂತರ ಭಾವೇನ ಭಜೇತಾದ್ಧಾವಿಮುಕ್ತ ಯೇ ॥**

**ಇತ್ಯುಕ್ತಸ್ತಂ ಪರಿಕ್ರಮ್ಯ ಪ್ರಣಮ್ಯ ಚನೃಪಾರ್ಭಕಃ ।**
**ಯಯೌ ಮಧುವನಂ ಪುಣ್ಯಂ ಹರೇಶ್ಚರಣಚರ್ಚಿತಮ್ ॥**

ಇಷ್ಟು ನಾರದರಿಂದ ಉಪದಿಷ್ಟಿತನಾಗಿ ತನಗೆ ನಿಯತ ಗುರುಗಳಾದ ನಾರದರಿಗೆ ವಂದಿಸಿ ಆಶೀರ್ವಾದ ಅನುಮತಿ ಪಡೆದು ಮಧುವನದ ಕಡೆಗೆ ನಡೆದನು.

ಐದು ವರ್ಷದ ಬಾಲಕ ಧೃವನು ಅನನ್ಯ ಭಕ್ತಿಯಿಂದ ಶ್ರೀ ವಾಸುದೇವನನ್ನು ಕಠಿಣ ತಪಸ್ಸು, ಪೂಜಾ ಧ್ಯಾನಾದಿಗಳಿಂದ ಆರು ತಿಂಗಳಲ್ಲೇ ಶ್ರೀಲಕ್ಷ್ಮೀಪತಿ ಗರುಡವಾಹನನನ್ನು ಪ್ರತಿಕ್ಷಿಸಿಕೊಂಡನೆಂದು ತಿಳಿಸಲಾಗಿದೆ.

**(ಪರಮ ಭಗವದ್ಭಕ್ತನಾದ ಶ್ರೀ ಧ್ರುವರಾಜನೇ ಮುಂದೆ ಮಹಾತಪಸ್ವಿಗಳಾದ ಶ್ರೀಶ್ರೀಪಾದರಾಜರಾಗಿ ಅವತರಿಸಿ ಪರಮ ಪವಿತ್ರ ಕ್ಷೇತ್ರ ಮುಳಬಾಗಿಲಿನಲ್ಲಿ ಅದ್ಯಾಪಿ ವಿರಾಜಮಾನರಾಗಿರುವುರೆಂಬುದು ಗಮನಾರ್ಹ)** ಇಂತಹ ಪರಮ ಪವಿತ್ರ ಶ್ರೀರಮಾರಮಣನಿಗೆ ಅತ್ಯಂತ ಪ್ರೀತಕರವಾದ ಈ ದ್ವಾದಶಾಕ್ಷರ ಮಂತ್ರವನ್ನು ಉಪಾಸಿಸುವ ಪದ್ಧತಿಯು ವಾಮನ ಪುರಾಣದಲ್ಲಿ ಉಲ್ಲೇಖಿಸಿದ್ದನ್ನು ಸಂಗ್ರಹವಾಗಿ ಕೆಳಗೆ ಕೊಡಲಾಗಿದೆ. **''ಪತ್ರಂ ಪುಷ್ಪಂ ಫಲಂ ತೋಯಂ ಯೋಮೇ ಭಕ್ತ್ಯಾ ಪ್ರಯಚ್ಛತಿ''** ಎಂಬ ಗೀತಾ ವಾಕ್ಯದಂತೆ ಈ ಹನ್ನೆರಡು ಅಕ್ಷರಗಳುಳ್ಳ ಮಂತ್ರದಲ್ಲಿ ಒಂದೊಂದು ಅಕ್ಷರವೂ ಒಂದು ತುಳಸೀ ಪತ್ರವೆಂದು ಭಾವಿಸಿ ಹರಿಗೆ ಸಮರ್ಪಿಸಬೇಕೆಂದು ಪುರಾಣದಲ್ಲಿ ನಿರೂಪಿತವಾಗಿದೆ.

೧. **ಓಂ** ಕಾರವು – ಶಿರಸ್ಸಿನ ಮೇಲಿಡುವ ಪ್ರಥಮ ಪತ್ರ (ವೈಶಾಖ ಮಾಸ ಸಹಿತ ಮೇಷ ಮಾಸವೇ ಶಿರೋರೂಪವಾಗಿ ಇದಕ್ಕೆ ಆಶ್ರಯ.

೨. **ನ** ಕಾರವು – ಸಂವತ್ಸರ ಸ್ವರೂಪನಾದ ಹರಿಯ ಮುಖ, ಎರಡನೇ ಪತ್ರ (ಜ್ಯೇಷ್ಠ + ವೃಷಭಮಾಸ)

೩. **ಮೋ** ಕಾರವು – ಶ್ರೀಶನ ಭುಜದ್ವಯದಲ್ಲಿ ಕಾಣುವ ಮೂರನೆಯ ಪತ್ರ. (ಆಷಾಢ + ಮಿಥುನ ಮಾಸ)

೪. **ಭ** ಕಾರವು – ಭಗವಂತನ ಕಣ್ಣುಗಳಲ್ಲಿರುವ ನಾಲ್ಕನೇ ಪತ್ರ (ಶ್ರಾವಣ + ಕರ್ಕಾಟಕ ಮಾಸ)

೫. **ಗ** ಕಾರವು – ಪರಮಾತ್ಮನ ಹೃದಯದಲ್ಲಿರುವ ಐದನೇ ಪತ್ರ (ಭಾದ್ರಪದ + ಸಿಂಹ ಮಾಸ)

೬. **ವ** ಕಾರವು – ಭಗವಂತನ ಕವಚದಲ್ಲಿರುವ ಆರನೇ ಪತ್ರ (ಆಶ್ವಯುಜ + ಕನ್ಯಾ ಮಾಸ)

೭. **ತೇ** ಕಾರವು – ಶ್ರೀ ರಮಾರಮಣನ ಮನಸ್ಸಿನಲ್ಲಿರುವ ಏಳನೇ ಪತ್ರ (ಕಾರ್ತಿಕ + ತುಲಾ ಮಾಸ)

೮. **ವಾ** ಕಾರವು – ನಾರಾಯಣನ ನಾಭಿಯಲ್ಲಿರುವ ಎಂಟನೇ ಪತ್ರ (ಮಾರ್ಗಶೀರ್ಷ + ವೃಶ್ಚಿಕ ಮಾಸ)

೯. **ಸು** ಕಾರವು – ಪುರುಷೋತ್ತಮನ ಜಘನದಲ್ಲಿರುವ ಒಂಭತ್ತನೇ ಪತ್ರ (ಪುಷ್ಯ + ಧನುಸ್ಸು ಮಾಸ)

೧೦. **ದೇ** ಕಾರವು – ಲಕ್ಷ್ಮೀಶನ ಎರಡು ಮಂಡೆಗಳಲ್ಲಿರುವ ಹನ್ನೊಂದನೇ ಪತ್ರ (ಫಾಲ್ಗುಣ + ಕುಂಭ ಮಾಸ)

೧೧. **ವಾ** ಕಾರವು – ಸತ್ಯೇಶನ ಊರುಗಳಲ್ಲಿರುವ ಹತ್ತನೇ ಪತ್ರ (ಮಾಘ + ಮಕರ ಮಾಸ)

೧೨. **ಯ** ಕಾರವು – ಇಂದಿರೇಶನ ಪಾದದ್ವಯಗಳಲ್ಲಿರುವ ಹನ್ನೆರಡನೇ ಪತ್ರ (ಚೈತ್ರ + ಮೀನ ಮಾಸ)

ಹೀಗೆ ಶ್ರೀಮದ್ವಿಷ್ಣುವಿನ ಶಿರಸ್ಸಿನಿಂದ ಆರಂಭಿಸಿ ಪಾದಗಳವರೆಗೆ ಮತ್ತು ಆಯಾ ಚಾಂದ್ರಮಾನ ಸೌರಮಾನ ಮಾಸಗಳಿಗೆ ಆಶ್ರಯನಾದ ಶ್ರೀವಾಸುದೇವ ಮಂತ್ರವನ್ನು ಭಕ್ತಿ ಶ್ರದ್ಧೆಯಿಂದ ಉಪಾಸನೆ ಮಾಡಿದವರಿಗೆ "ಪುನರ್ಜನ್ಮ ನ ವಿದ್ಯತೆ" ಎಂಬುದಾಗಿ ಹೇಳಿದೆ.

**ವಿಶೇಷಾಂಶ :** ಇದೇ ಮಂತ್ರವು ಶ್ರೀರಾಮಚಂದ್ರನ ಪೂರ್ವಜನಾದ ಇಕ್ಷ್ವಾಕುರಾಜನಿಗೆ ವಶಿಷ್ಠ ಮುನಿಗಳು ಉಪದೇಶ ಮಾಡಿದರು. **(ನರಸಿಂಹ ಪುರಾಣ**



**ಶ್ರೀ ರಾಮಾವತಾರ ವರ್ಣನೆಯ ಪ್ರಸಂಗದಲ್ಲಿ ಇದು ಉಲ್ಲೇಖಿಸಿಲಾಗಿದೆ. ನರಸಿಂಹ ಪುರಾಣ ಅಧ್ಯಾಯ ೨೫ ವಂಶಾನುಚರಿತ ಶ್ಲೋಕ ೩೮–೪೨)**

ಇಕ್ಷ್ವಾಕು ಮಹಾರಾಜ ವೈರಾಗ್ಯ ಧಾರಣ ಮಾಡಿ ವಾನಪ್ರಸ್ತಕ್ಕೆ ತೆರಳುವ ಮುನ್ನ ತನ್ನ ಕುಲ ಗುರುಗಳಾದ ವಶಿಷ್ಠರನ್ನು "ಹೇ ಮುನಿಶ್ರೇಷ್ಠರೇ ಭಗವಂತನನ್ನು ಭಜಿಸಿ ಅವನ ಕರುಣೆಗೆ ಪಾತ್ರನಾಗಬೇಕೆಂದರೆ ಯಾವ ಮಂತ್ರದಿಂದ ಜಪಿಸಿ ಆ ಶ್ರೀಶನ ಪರಮಾನುಗ್ರಹ ಪಡೆಯಬಹುದು. ಅಂತಹ ದಿವ್ಯ ಮಂತ್ರವನ್ನು ಕೃಪೆ ಮಾಡಿ ಉಪದೇಶ ಮಾಡಿರಿ."

**ತಪಃಸಿದ್ಧ್ಯರ್ಥಮನಿಚ್ಛನ್ ತ್ವಾಂ ಸ್ನಾತ್ವಾ ತಪಃಕುರು ।**
**ತಾಪಸಾಂ ವೇಷಮಾಸ್ಥಾಯ ಶಾಕಮೂಲಫಲಾಶನಃ ॥**

**ಧ್ಯಾಯನ್ನಾರಾಯಣಂ ದೇವಮೇವಮಂತ್ರಂ ಸದಾ ಜಪ ।**
**ಓಂನಮೋ ಭಗವತೇ ವಾಸುದೇವಾಯ ॥**
**ಏಷಸಿದ್ಧಿ ಕರೋಮಂತ್ರೋ ದ್ವಾದಶಾಕ್ಷರ ಸಂಜ್ಞಿತಃ ।**

**ಜಪ್ಯೇನಂ ಮುನಯಃಸಿದ್ಧಿಂ ಪುರಾಪ್ರಾಪ್ತಾ ಪುರಾತನಾಃ ॥**
**ಬಾಹ್ಯೇಂದ್ರಿಯಂ ಹೃದಿಸ್ಥಾಪ್ಯ ಮನಸ್ಸೂಕ್ಷ್ಮೇಪರಾತ್ಮನಿ ।**

**ನೃಪ ಸಂಜಪತನ್ಮಂತ್ರಂ ದ್ರಷ್ಟವ್ಯೋ ಮಧುಸೂದನಃ ।**
**ಇತಿ ತೇಕಥಿತೋಪಾಯೋ ಹರಿಪ್ರಾಪ್ತೇಸ್ತಪಃ ಕುರು ॥**

ಹೇ ಇಕ್ಷ್ವಾಕು ಮಹಾರಾಜ ! ನಿನ್ನ ಮನಸ್ಸಿನಂತೆ ನಿಷ್ಕಾಮದಿಂದ ತಪಸ್ಸನ್ನು ಮಾಡು ತಾಪಸರ ವೇಷಧಾರಣ ಮಾಡಿ ಕಂದಮೂಲ ಫಲಗಳನ್ನು ಸ್ವೀಕರಿಸು. ಮುಂದೆ ಉಪದೇಶಿಸುವ ಮಂತ್ರದಿಂದ ಶ್ರೀಮನ್ನಾರಾಯಣನನ್ನು ಧ್ಯಾನಿಸು **"ಓಂನಮೋ ಭಗವತೇ ವಾಸುದೇವಾಯ"** ಎಂಬುದು ಸರ್ವ ಸಿದ್ಧಿಕರವಾದುದು. ಹಿಂದೆ ತಪಸ್ವಿಗಳು ಇದೇ ಮಂತ್ರೋಪಾಸನೆಯಿಂದ ಸಿದ್ಧಿ ಪಡೆದಿರುತ್ತಾರೆ. ಇಂದ್ರಿಯ ನಿಗ್ರಹ ಮಾಡಿ ಮನಸ್ಸನ್ನು ಶ್ರೀ ಮಧುಸೂದನನಲ್ಲಿ ಸ್ಥಿರವಾಗಿ ನಿಲ್ಲಿಸು. ಇಂತಹ ದಿವ್ಯ ಮಂತ್ರೋಪಾಯದಿಂದ ಹರಿಪ್ರಸನ್ನತೆಗೆ ಪಾತ್ರನಾಗುವಿ ಎಂದು ತಿಳಿಸುತ್ತಾರೆ.

ಶ್ರೀಮದಾಚಾರ್ಯರು ತಂತ್ರಸಾರ ಸಂಗ್ರಹದಲ್ಲಿ ವಾಸುದೇವ ಮಂತ್ರದ ಮಹತ್ವ ಮತ್ತು ಜಪಕ್ರಮವನ್ನು ತಿಳಿಸಿರುತ್ತಾರೆ.

**ದ್ವಾದಶಾರ್ಣಸ್ಯ ಜಗತೀ ಚಂದೋಽನ್ಯತ್ತಾರವತ್ ಸ್ಮೃತಮ್ ।**
**ಅಚ್ಛವರ್ಣೋಽಭಯವರಕರೋಧ್ಯೇಃ ಯೊ ಅಮಿತದ್ಯುತಿಃ ॥**
**ಪದೈರ್ವಸ್ತೈ: ಸ್ಸಮಸ್ತೈಶ್ಚ ಜ್ಞೇಯೋನ್ಯಂಗಾನಿ ಪಂಚ ಚ ।**
**ಅಷ್ಟಾಕ್ಷರಾಣಾಂ ಸ್ಥಾನೇಷು ಬಾಹ್ವೋರೂರ್ವೋಶ್ಚ ವಿನ್ಯಸೇತ್**

(ಅ.೧ ಶ್ಲೋ. ೪೦, ೪೧)

ವಾಸುದೇವ ಮಂತ್ರದ ಋಷಿದೇವತಾ ಓಂಕಾರದಲ್ಲಿದ್ದಂತೆ ಶ್ರೀಹರಿಯೇ


**ವಾಸುದೇವ**

ಆಗುತ್ತಾನೆ. ಈ ಮಂತ್ರವು ಜಗತೀ ಛಂದಸ್ಸಿನಿಂದ ಕೂಡಿರುತ್ತದೆ. ಈ ಮಂತ್ರದಲ್ಲಿ ಧ್ಯಾನಕ್ಕೆ ವಿಷಯವಾದ ಭಗವದ್ರೋಪವು ಶುಭ್ರ ಪ್ರಕಾಶಮಾನವೋ, ಅಭಯ ವರಮುದ್ರೆಯಿಂದ ಕೂಡಿರುತ್ತೆ. ಐದು ಅಂಗನ್ಯಾಸ = ತೋಳುಗಳು, ತೊಡೆಗಳು ಎಲ್ಲಾ ಹನ್ನೆರಡು ಸಾಧನಗಳು. ವಾಸುದೇವ ರೂಪಿ ಭಗವಂತನು ಧರಿಸಿದ ಆಯುಧಗಳು ಶಂಖ, ಚಕ್ರ, ಪದ್ಮ, ಗದಾ ಹೀಗೆ ವಾಸುದೇವ ಮಂತ್ರದಿಂದ ಅಂಗನ್ಯಾಸ ಮಾಡಬೇಕೆಂದು ಆಚಾರ್ಯ ಶ್ರೀಮಧ್ವರು ತಿಳಿಸಿರುತ್ತಾರೆ.

ಇದೂ ಅಲ್ಲದೆ ಈ ಮಹಾಮಂತ್ರದಿಂದ ಸಾಲಿಗ್ರಾಮಗಳನ್ನು ಶಾಸ್ತ್ರರೀತ್ಯ ಅಭಿಷೇಕ ಮಾಡಿದ ತೀರ್ಥದಿಂದ ವಿದ್ಯುಕ್ತವಾಗಿ ಸ್ನಾನ ಮಾಡಿದರೆ ಸದಾ ಗಂಗಾದಿ ಸರ್ವ ತೀರ್ಥಗಳಲ್ಲಿ ಸ್ನಾನ ಮಾಡಿದ ಫಲವು ಲಭಿಸುವುದೆಂದು ಶ್ರೀಮದಾಚಾರ್ಯರು **ಬ್ರಹ್ಮಾ ದ್ವಾದಾಕ್ಷರ ಮಂತ್ರೇಣ ಹ್ಯಭಿಷಿತಚ್ಚ ವಿಧಾನತಃ**

**''ಸಾಲಗ್ರಾಮ ಜಲೈಃ ಸ್ನಾತಃ ಸರ್ವತೀರ್ಥೇಷು ಸರ್ವದಾ''** ಎಂದು ಕೃಷ್ಣಾಮೃತ ಮಹಾರ್ಣವ ಗ್ರಂಥ ಶ್ಲೋಕ ೧೦೭ರಲ್ಲಿ ತಿಳಿಸಿದ್ದಾರೆ.

**ಯಶ್ಚ ಕ್ರಮಭಿಷಿಭ್ಯಾಥ ತತ್ತೋ ಯೈಃ ಸ್ಪರೋನರಃ ।**
**ಅಭಿಷಿಚ್ಯಯದಿ ಪಿ ಬೇದ್ಯಾತಿ ವಿಷ್ಣೋಃ ಪರಂ ಪದಂ**

ಭಕ್ತನಾದವನು ಹನ್ನೆರಡು ಅಕ್ಷರಗಳುಳ್ಳ **''ಓಂನಮೋ ಭಗವತೇ ವಾಸುದೇವಾಯ''** ಎಂಬ ಮಂತ್ರದಿಂದ ಸಾಲಗ್ರಾಮವನ್ನು ಶಾಸ್ತ್ರೋಕ್ತವಾಗಿ (ಸಹಸ್ರಶೀರ್ಷಾ ಆದಿ) ಮಂತ್ರಗಳಿಂದ ಅಭಿಷೇಕ ಮಾಡಿ ಆ ತೀರ್ಥದಿಂದ ವಿದ್ಯುಕ್ತವಾಗಿ ಸ್ನಾನ ಪ್ರಾಸನ ಮಾಡಿದಾಗ ತತ್ಫಲವಾಗಿ ಸಮಸ್ತ ಭಾಗೀರಾತ್ಯಾದಿ ಸರ್ವ ತೀರ್ಥಗಳಲ್ಲಿ ಸ್ನಾನ ಮಾಡಿದ ಫಲವು ಲಭಿಸುವುದು ಎಂದು ತಿಳಿಸಲಾಗಿದೆ.

**ಪ್ರೊ॥ ಬದರೀನಾಥಾಚಾರ್ಯ ಘೂಳೀ ಎಂ.ಎ.**
ಮಾಧವ ಮಧ್ವ ಪ್ರಕಾಶನ
ಬೆಂಗಳೂರು